ರಾಜ್ಯದಲ್ಲಿ ತಹಶೀಲ್ದಾರರ ಜೀಪುಗಳಿಗೆ ಪೆಟ್ರೋಲ್ ನೀಡಿಕೆ.

4197(4518) ಶ್ರೀ ಕರಿಯಣ್ಣ (ಹೊಳೆಹೊನ್ನೂರು) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ರಾಜ್ಯದಲ್ಲಿ ತಹಶೀಲ್ದಾರರ ಜೀಪುಗಳಿಗೆ ಒಂದು ತಿಂಗಳಿಗೆ ಎಷ್ಟು ಲೀಟರ್ ಪೆಟ್ರೋಲ್ ಅಥವಾ ಡೀಜೆಲ್ ನೀಡಲಾಗುವುದು?

2. ರಾಜ್ಯದ 175 ತಾಲ್ಲೂಕುಗಳಲ್ಲಿ ಜೀಪುಗಳನ್ನು ಒದಗಿಸಲಾಗಿದೆಯೇ?

3. ಇವುಗಳ ಪೈಕಿ ಪೆಟ್ರೋಲ್ ಜೀಪುಗಳ ಸಂಖ್ಯೆ ಎಷ್ಟು ಮತ್ತು ಡೀಜೆಲ್ ಜೀಪುಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :—

1. ಪ್ರತಿ ತಹಸೀಲ್ದಾರರ ಜೀಪಿಗೆ ಪ್ರತಿ ತಿಂಗಳು 200 ಲೀಟರ್ ಡೀಜೆಲ್ ನೀಡಲಾಗುತ್ತದೆ.

2. ಹೊಸದುರ್ಗ, ರಾಮದುರ್ಗ, ಮುಧೋಳ ಮತ್ತು ಸವಣೂರ ತಾಲ್ಲೂಕುಗಳನ್ನು ಹೊರತುಪಡಿಸಿ ಎಲ್ಲ ತಾಲ್ಲೂಕುಗಳಲ್ಲಿ ಜೀಪುಗಳನ್ನು ಒದಗಿಸಲಾಗಿದೆ.

3. ಇವು ಎಲ್ಲವೂ ಡೀಜೆಲ್ ಜೀಪುಗಳಾಗಿರುತ್ತವೆ.

ಆಶ್ರಯ ಮನೆಗಳ ವಿತರಣೆ.

4198(4514) ಶ್ರೀ ಕರಿಯಣ್ಣ (ಹೊಳೆ ಹೊನ್ನೂರು) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ವಿತರಿಸಲಾದ ಆಶ್ರಯ ಮನೆಗಳ ಸಂಖ್ಯೆ ಎಷ್ಟು ;

ಆ) ಪ್ರತಿಯೊಂದು ಜಿಲ್ಲೆಗೆ ಯಾವ ಆಧಾರದ ಮೇಲೆ ಮನೆಗಳ ಸಂಖ್ಯೆಯನ್ನು ನಿಗಧಿಪಡಿಸಲಾಗಿರುವುದು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :—

ಅ) 614006

ಆ) 2000-2001ನೇ ಸಾಲಿನಲ್ಲಿ ಜಿಲ್ಲೆಯ ಜನಸಂಖ್ಯಾ ಆಧಾರದ ಮೇಲೆ ವಿತರಿಸಲಾಗಿದೆ.